**ಓ ಎಸ್ ನಂಃ175/2011**
**ಪಿಡಬ್ಲ್ಯೂ:01**

**ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಜಿ.ಎಸ್., 1 ರಿಂದ 7, 9 , 10, 12, 13 ನೇ ಪ್ರತಿವಾದಿ ಪರ ವಕೀಲರಿಂದ**

ದಿನಾಂಕ 10.03.2011 ರಿಂದ ನಿಪಿ.32 ರ ದಾಖಲೆಯು ನನ್ನ ವಶದಲ್ಲಿ ಇರುತ್ತದೆ ಎಂದರೆ ಸರಿ. ನಿಪಿ.32 ರ ಪ್ರತಿ ಪುಟಗಳಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದಾಗಿರುತ್ತದೆ ಎಂದರೆ ಸರಿ. ನಿಪಿ.32 ನ್ನು ವಾದಿ ಮತ್ತು ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನಿಪಿ.32 ಕ್ಕೆ ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ32 ರ ದಾಖಲೆಯನ್ನು ದೊಡ್ಡರಂಗಪ್ಪ, ಸಣ್ಣರಂಗಪ್ಪ, ಗೌರಮ್ಮ, ಸಣ್ಣತಿಮ್ಮಯ್ಯ, ಗೌರಿಪುರದ ರಂಗಪ್ಪ ರವರೊಂದಿಗೆ ಮಾಡಿಕೊಳ್ಳಲಾಗಿರುತ್ತದೆ. ನಿಪಿ.32 ರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಗಳು ವಿಭಾಗವಾಗದ ಕಾರಣ ನಿಪಿ.32 ರ ಪ್ರಕಾರ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತೇವೆ. ನಿಪಿ.32 ರ ವಿಭಾಗ ಪತ್ರದ ರೀತ್ಯ ಯಾವುದೇ ಆಸ್ತಿಗಳನ್ನು ಹಂಚಿಗೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 10.03.2011 ರ ಪಾಲು ವಿಭಾಗವನ್ನು ಮರೆ ಮಾಚುವ ಸಲುವಾಗಿ ಇಲ್ಲಿಯವರೆಗೂ ನಿಪಿ.32 ರ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ್ 3 ಮತ್ತು 28 ರ ಜಮೀನುಗಳು ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಬಂದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನಿಪಿ.32 ರ ದಾಖಲೆಯಲ್ಲಿ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನು ಹಂಚಿಕೆ ಮಾಡಿಕೊಳ್ಳಲಾಗುತ್ತಿದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.32 ರ ದಾಖಲೆಯ ಪ್ರಕಾರ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುವುದಿಲ್ಲ ಹಾಗೂ ಸರ್ವೆ ಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.32 ರ ರೀತ್ಯ ವರ್ಗಾವಣೆಯಾದ ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

**ಓ ಎಸ್ ನಂಃ175/2011**

**ಪಿಡಬ್ಲ್ಯೂ:01**

ಸರ್ವೆ ನಂಬರ್ 3 ರ ಜಮೀನಿನ ಒಟ್ಟು ವಿಸ್ತೀರ್ಣ 15 ಎಕರೆ 23 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 28 ರಲ್ಲಿ ಒಟ್ಟು 5 ಎಕರೆ 36 ಗುಂಟೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಮಗೆ ಸೇರಿದ 2 ಎಕರೆ 6 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೌಂಟರ್ ಕ್ಲೈಮ್ ಸ್ವತ್ತುಗಳನ್ನು ಇದೂವರೆಗೂ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಕೌಂಟರ್ ಕ್ಲೈಮ್ ಸ್ವತ್ತುಗಳು ಇದೂವರೆಗೂ ವಿಭಾಗ ಆಗದೇ ಇದ್ದರೂ ವಿಭಾಗ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.32 ರೀತ್ಯ ಆಸ್ತಿ ವಿಭಾಗ ಆಗಿದ್ದರೂ ಆಗಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.32 ರ ರೀತ್ಯ ಆಸ್ತಿಯನ್ನು ಹಂಚಿಕೆ ಮಾಡಿಕೂಳ್ಳದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಾವ ಷೆಡ್ಯೂಲ್ ಸ್ವತ್ತುಗಳು ಕ್ರಯಕ್ಕೆ ಪಡೆದ ಸ್ವತ್ತುಗಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.32 ರಲ್ಲಿನ ದಾವಾ ಸ್ವತ್ತುಗಳನ್ನು 1/3 ನೇ ವಿಭಾಗ ಮಾಡಿದರೆ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ಈ ಹಿಂದೆ ವಿಭಾಗ ವಾಗದ ಸ್ವತ್ತನ್ನು ಕೌಂಟರ್ ಕ್ಲೈಮ್ ನಲ್ಲಿ ಸೇರಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.